ಸಂಚಿಕೆ
೦೬
ಸೆಪ್ಟೆಂಬರ್ ೨೦೧೬

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ





Copyright © KCO – Brindavana

ಸಂಚಿಕೆ ೦೬
ಸೆಪ್ಟೆಂಬರ್ ೨೦೧೯

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## ಈ ಸಂಚಿಕೆಯಲ್ಲಿ....

ಸಂಪಾದಕೀಯ ಪು ೧
ಹಿನ್ನೋಟ ಪು ೨
ಲೇಖನ ಪು ೩
ಪ್ರವಾಸ ಕಥನ ಪು ೪-೬
ಸಂದರ್ಶನ ಪು ೭
ಮುನ್ನೋಟ ಪು ೮

**ಸಂಪಾದಕ ಮಂಡಳಿ**


ಸತ್ಯ ಪ್ರಸಾದ್
ಪ್ರಧಾನ ಸಂಪಾದಕರು


ಸರಿತಾ ನವಲಿ
ಸಂಪಾದಕರು


ಅಹೀಶ್ ಭಾರದ್ವಾಜ
ಸಂಪಾದಕ ವರ್ಗ


ಡಾ. ಅಶೋಕ್ ಕಟ್ಟೀಮನಿ
ಸಂಪಾದಕ ವರ್ಗ


ಕಾವ್ಯಾ ಕಡಮೆ
ನಾಗರಕಟ್ಟೆ
ಸಂಪಾದಕ ವರ್ಗ


ರಾಘವೇಂದ್ರ
ಕುಂದಲಗುರ್ಕಿ
ಸಂಪಾದಕ ವರ್ಗ


ಕೇಶವ ಪ್ರಶಾಂತ್
ಸಂಪಾದಕ ವರ್ಗ

ಮುಖಪುಟ ಚಿತ್ರ: ಹಂಪಿ ಕಲ್ಲಿನ ರಥ
ಕೃಪೆ : ಶ್ರೀನಿವಾಸ್ ಎಣ್ಣಿ,
ಗಂಗಾವತಿ, ಕರ್ನಾಟಕ

ಸಂಪಾದಕೀಯ ಪುಟ ಚಿತ್ರ: ಹಂಪಿ
ಕೃಪೆ : ಶ್ರೀನಿವಾಸ್ ಎಣ್ಣಿ,
ಗಂಗಾವತಿ, ಕರ್ನಾಟಕ

ಪತ್ರಿಕೆ ವಿನ್ಯಾಸ:
ಅಹೀಶ್ ಭಾರದ್ವಾಜ
ಕೇಶವ ಪ್ರಶಾಂತ್

## ಅಧ್ಯಕ್ಷರ ಮಾತು.....



ಕನ್ನಡ ಮಿತ್ರರಿಗೆ ನಮಸ್ಕಾರ

ನ್ಯೂ ಜೆರ್ಸಿಯಲ್ಲಿ ಬೇಸಿಗೆಯ ಬಿಸಿ ಏರುತ್ತಿದ್ದಂತೆ ಕನ್ನಡದ ಬಿಸಿ ಕೂಡ ಏರುತ್ತಿದೆ. ನಾವಿಕೋತ್ಸವ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಜುಲೈ ೧೯ ಮತ್ತು ೧೭ರಂದು ಅದ್ದೂರಿಯಾಗಿ ನಡೆಯಿತು, ಬೃಂದಾವನ ಕೂಡ ಅಲ್ಲಿ ಛಾಪು ಮೂಡಿಸಿತು, ಬೃಂದಾವನ ಕನ್ನಡ ಶಾಲೆ, ಪಠ್ಯ ಕ್ರಮಕ್ಕೆ ತುಂಬಾ ಬೆಂಬಲದೊರೆಯಿತು. ನಾವಿಕೋತ್ಸವದ ಸ್ಮರಣ ಸಂಚಿಕೆ 'ತವರು' ಚೆನ್ನಾಗಿ ಮೂಡಿ ಬಂದಿದೆ. ಅದರಲ್ಲಿ ಬೃಂದಾವನದ ಕನ್ನಡ ಶಾಲೆಗಳ ಬಗ್ಗೆ ವಿಶೇಷ ಅಂಕಣ ಮನ ಸೆಳೆದಿದೆ. ನಾವಿಕ ಅಧ್ಯಕ್ಷರಾದ ಡಾ. ರೇಣುಕಾ ರಾಮಪ್ಪ ಮತ್ತು ತಂಡಕ್ಕೆ ನಮ್ಮ ಅಭಿನಂದನೆಗಳು.

೯ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನಕ್ಕೆ (ಸೆ ೨, ೩ & ೪) ಇನ್ನು ಕೆಲವೇ ದಿನಗಳು ಉಳಿದಿವೆ. ಬೃಂದಾವನದ ಹಲವಾರು ಸದಸ್ಯರು ಹತ್ತಾರು ಸಮಿತಿಗಳಿಗೆ ನಾಯಕರಾಗಿ, ಸದಸ್ಯರಾಗಿ ರೂಪ ರೇಖೆಗಳನ್ನ ನೀಡುತ್ತಿದ್ದಾರೆ ಎಂಬ ಸಂತೋಷವಿದೆ. ಬೃಂದಾವನದಿಂದ ೩೫೦ಕ್ಕೂ ಹೆಚ್ಚುಕಲಾವಿದರು ೨೫೦ಕ್ಕೂ ಹೆಚ್ಚು ನಿಮಿಷಗಳ ಕಾರ್ಯಕ್ರಮ ಕೊಡಲು ಸಿದ್ಧರಾಗುತ್ತಿದ್ದಾರೆ, ವಿಶೇಷಗಳು ಇಂತಿವೆ

* ರೈತ ನಿನಗೆ ನಮೋ ನಮಃ , ನಮ್ಮ ಅನ್ನದಾತ ರೈತನಿಗೆ ೧೫೦ಕ್ಕೂ ಹೆಚ್ಚು ಕಲಾವಿದರ ಒಂದು ನಮನ
* ಜ್ಞಾನ ಪೀಠ ವೈಭವ ಎಂಬ ರೂಪಕಕ್ಕೆ ಬೃಂದಾವನ ಕನ್ನಡ ಶಾಲೆಯ ೪೫ ಮಕ್ಕಳು ತಯ್ಯಾರಿ ನಡೆಸಿದ್ದಾರೆ
* ರಾಗ ನಾಟ್ಯ ಧಾರೆ - ಬೃಂದಾವನದ ಹತ್ತಾರು ಪ್ರತಿಭಾವಂತ ಹಾಡು, ನೃತ್ಯ ಕಲಾವಿದರು ರಂಜಿಸುತ್ತಾರೆ
* ೫೦ಕ್ಕೂ ಹೆಚ್ಚು ಯುವ ಬೃಂದಾವನದ ಕಲಾವಿದರು ಅಕ್ಕ ನಡೆದು ಬಂದ ದಾರಿ, ಕ್ಲೋಸಿಂಗ್ , ಅಂಬಿ ನೈಟ್ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ
* ಅಕ್ಕ ಮೆರವಣಿಗೆಯಲ್ಲಿ ಬೃಂದಾವನ, ಮೈಸೂರು ಪ್ರತಿಬಿಂಬಿಸಿ ದೊಡ್ಡ ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ನ್ಯೂ ಜೆರ್ಸಿಯಲ್ಲಿ ನಡೆಯುತ್ತಿರುವ ೯ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನ ನಮಗೆ ತುಂಬಾ ಹೆಮ್ಮೆ , ಈ ದೊಡ್ಡ ಕನ್ನಡ ಜಾತ್ರೆಗೆ ಹೆಗಲು ಕೊಟ್ಟಿರುವ ಬೃಂದಾವನದ ನೂರಾರು ಸ್ವಯಂ ಸೇವಕರಿಗೆ ನಾವೆಲ್ಲಾ ಚಿರ ಋಣಿ. ಬೃಂದಾವನದ ಸದಸ್ಯರು ಅಕ್ಕ ವಿಶ್ವ ಕನ್ನಡ ಸಮ್ಮೇಳನದ ಜಾತ್ರೆಗೆಸಿದ್ಧವಾಗಿದ್ದೇವೆ, ೯ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನ ಯಶಸ್ವಿಯಾಗಲಿ ಎಂಬ ವಾಣಿಯನ್ನು ನಿಮ್ಮೆಲ್ಲರ ಪರವಾಗಿ ಅಕ್ಕ ಅಧ್ಯಕ್ಷ ರಾಜ್ ಪಾಟೀಲ್ ಮತ್ತು ತಂಡಕ್ಕೆ ತಿಳಿಸಲು ಇಚ್ಛೆಸುತ್ತೇನೆ.

ಮಲ್ಲಿಕ್ ಪ್ರಸಾದ್

## ಪ್ರಧಾನ ಸಂಪಾದಕರಿಂದ......

**ಅಕ್ಕ ಕ್ಷಣಗಣನೆ....**

ಬೃಂದಾವನ ಬಾಂಧವರಿಗೆ ನಮಸ್ಕಾರಗಳು !!!

ನಿಮಗೆಲ್ಲ ತಿಳಿದಿರುವ ಹಾಗೆ ಸೆಪ್ಟೆಂಬರ್ ೨-೪ ರವರೆಗೆ ನಮ್ಮ ನ್ಯೂ ಜೆರ್ಸಿಯ ಅಟ್ಲಾಂಟಿಕ್ ಸಿಟಿ ಯಲ್ಲಿ '೯ ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನ' ನಡೆಯಲಿದೆ. ಸಮ್ಮೇಳನ ವನ್ನು ಅತ್ಯಂತ ಯಶಸ್ವಿಯಾಗಿ ನಡೆಸಲು ನೂರಾರು ಸ್ವಯಂ ಸೇವಕರು ಟೊಂಕ ಕಟ್ಟಿ ನಿಂತಿದ್ದಾರೆ. ನಮ್ಮ ಬೃಂದಾವನ ವಾಣಿ ತಂಡದ ಸದಸ್ಯರೆಲ್ಲರೂ ಸುಮಾರು ಸಮಿತಿಯ ಮುಖ್ಯಸ್ಥರಾಗಿ ಮತ್ತು ಸದಸ್ಯರಾಗಿ ಒಂದೇ ನಾಟಕದಲ್ಲಿ ಬಹು ಪಾತ್ರ ವಹಿಸಿದಂತೆ ಅನೇಕ ಸಮಿತಿಗಳಲ್ಲಿ ಹಗಲಿರುಳು ದುಡಿ ಯುತ್ತಿದ್ದಾರೆ. ಆ ಕಾರಣ ಈ ಬಾರಿಯ ಬೃಂದಾವನ ವಾಣಿಯ ಸಂಚಿಕೆಯಲ್ಲಿ ಕೆಲವು ಅಂಕಣಗಳಿಗೆ ನ್ಯಾಯ ಒದಗಿಸಲಾಗುತ್ತಿಲ್ಲ.

ನಿಮ್ಮೊಂದಿಗೆ ಈ ವಿಷಯವನ್ನು ಹಂಚಿಕೊಳ್ಳಲೇ ಬೇಕು, ಈ ಬಾರಿಯ ಅಕ್ಕ ಸಮ್ಮೇಳನದಲ್ಲಿ ನಮ್ಮ ಬೃಂದಾವನದಿಂದ ಸುಮಾರು ನೂರಕ್ಕೂ ಹೆಚ್ಚು ಸದಸ್ಯರು ಮಕ್ಕಳೊಂದಿಗೆ ವಿನೂತನ ಕಾರ್ಯಕ್ರಮಗಳಾದ ಧನಂ, ರೈತ ನಮನ, ರಾಗ ನಾಟ್ಯ ಧಾರೆ, ಜ್ಞಾನ ಪೀಠ (ಮಕ್ಕಳು), ಹಣ ಹದ್ದು (ನಾಟಕ) ನಡೆಸಿಕೊಡುತ್ತಿದ್ದಾರೆ. ಯಾವುದೇ ನುರಿತ ಕಲಾವಿಧರಿಗೂ ಕಡಿಮೆಯಿಲ್ಲದೆ ತಯಾರಿ ನಡೆಯುತ್ತಿದೆ. ದಯವಿಟ್ಟು ತಪ್ಪದೆ ಕಾರ್ಯಕ್ರಮಗಳಿಗೆ ಬಂದು ಪ್ರೋತ್ಸಾಹಿಸಿ.

ಮೇಲೆ ತಿಳಿಸಿದ ಹಾಗೆ ತಂಡದ ಸದಸ್ಯರೆಲ್ಲಾ ಅಕ್ಕ ಕಾರ್ಯಕ್ರಮಗಳೊಂದಿಗೆ ಬಿಡುವಿಲ್ಲದ ಕೆಲಸದಲ್ಲಿ ಮುಳುಗಿರುವಾಗ ಕಾವ್ಯ ಮತ್ತು ಕೇಶವ ಮುಂದೆ ಬಂದು ಅತೀ ಮುತುವರ್ಜಿಯಿಂದ ಈ ಸಂಚಿಕೆಯನ್ನು ರೂಪಿಸಿದ್ದಾರೆ, ಎಂದಿನಂತೆ ತಂಡದ ಸದಸ್ಯರೆಲ್ಲ ಆಸರೆಯಾಗಿದ್ದಾರೆ. ಎಲ್ಲರಿಗೂ ನನ್ನ ಅನಂತ ನಮನಗಳು.

ಅಕ್ಕ ಜಾತ್ರೆಯಲ್ಲಿ ಬಾಗವಹಿಸುವುದೇ ಒಂದು ರೋಚಕ ಅನುಭವ. ಸುಮಾರು ೫ ಲಕ್ಷ ಚದುರಡಿಯ (ಸುಮಾರು ೧೩ ಎಕರೆಷ್ಟು) ವಿಶಾಲವಾದ ಕನ್ವೆನ್ಷನ್ ಹಾಲ್, ಸುಸಜ್ಜಿತ ವೇದಿಕೆಗಳು, ಅತಿ ದೊಡ್ಡ ಭೋಜನ ಶಾಲೆ. ಹತ್ತಾರು ಕಾರ್ಯಕ್ರಮಗಳು ನಾಡಿನ ನೂರಾರು ಹೆಸರಾಂತ ಕಲಾವಿಧರು ಇತ್ಯಾದಿ ಇತ್ಯಾದಿ..

ತಪ್ಪದೆ ಬನ್ನಿ ಅಕ್ಕ ಸಮ್ಮೇಳನದಲ್ಲಿ ಸಿಗೋಣ.

## ಸಂಪಾದಕರಿಂದ......

ನ್ಯೂ ಜೆರ್ಸಿ ಮತ್ತು ಸಮಸ್ತ ಕನ್ನಡ ಬಳಗಕ್ಕೆ ನಮಸ್ಕಾರಗಳು. ಬೃಂದಾವನ ವಾಣಿಯ ಸಂಚಿಕೆಗಳನ್ನು ನೀವೆಲ್ಲ ಓದಿ ಮೆಚ್ಚಿದ್ದಕ್ಕೆ, ವಾಣಿಯ ಸಂಪಾದಕ ತಂಡದ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು. ನಿಮ್ಮ ಸಲಹೆ ಮತ್ತು ಅನಿಸಿಕೆಗಳನ್ನು ತುಂಬು ಹೃದಯದಿಂದ ಸ್ವೀಕರಿಸಿ ,ಮುಂಬರುವ ಸಂಚಿಕೆಗಳಲ್ಲಿ ಅವುಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತೇವೆ.

ಸಮಸ್ತ ಕನ್ನಡಿಗರಿಗೆಲ್ಲರಿಗೆ ಸಂತಸದ ಸಮಯ! ನ್ಯೂ ಜೆರ್ಸಿಯ ಕಡಲ ತೀರ ಅಟ್ಲಾಂಟಿಕ್ ಸಿಟಿಯಲ್ಲಿ ಸೆಪ್ಟೆಂಬರ್ ೨ , ೩ ಮತ್ತು ೪ ರಂದು ನಡೆಯಲಿರುವ ೯ ನೇ 'ಅಕ್ಕ'ವಿಶ್ವ ಕನ್ನಡ ಸಮ್ಮೇಳನದ ಸಿದ್ಧತೆಗಳು ಕಳೆದ ೬-೮ ತಿಂಗಳುಗಳಿಂದ ನಡೆದಿದ್ದು ,ಈಗ ಸಮ್ಮೇಳನಕ್ಕೆ ಕ್ಷಣಗಣನೆ ಪ್ರಾರಂಭವಾಗಿದೆ. ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರ ಕವನದ ಸಾಲುಗಳು ಹೇಳುವಂತೆ,

" ನಾಡಿನ ಬೆಳಕನು ಹೊತ್ತುತಂದೆವು
ಅಮೆರಿಕಕ್ಕೆ ಇಲ್ಲಿ
ಆರದಂತೆ ಅದ ಕಾಯ್ದುಕೊಂಡೆವು ಮಳೆ
ಬಿರುಗಾಳಿಯಲಿ ।
ಗದ್ದೆವು ಇಲ್ಲಿ ಹೊಸ ಹೊಸ ನೆಲೆಯ ಬುದ್ಧಿಯ
ಬಲದಿಂದ
ತವರಿನ ಬಾವುಟ ಎತ್ತಿ ಹಿಡಿದೆವು ಶ್ರಮದ
ದುಡಿಮೆಯಿಂದ" ।

ನಿಜ , ತಾಯ್ನಾಡಿನಿಂದ ಸಾವಿರಾರು ಮೈಲಿ ದೂರ ನೆಲೆಸಿದ್ದರೂ , ಮಾತೃ ಭಾಷೆಯ ಬಗೆಗಿನ ಅಭಿಮಾನವೇ ಇಂತಹ ವಿಶ್ವ ಕನ್ನಡ ಸಮ್ಮೇಳನವನ್ನು ವಿಜೃಂಭಣೆಯಿಂದ ಆಚರಿಸಲು ಆತ್ಮ- ಸ್ಥೈರ್ಯ ನೀಡುವುದು ಎಂದರೆ ಉತ್ಪ್ರೇಕ್ಷೆ ಆಗಲಾರದು. 'ಅಕ್ಕ' ಸಮ್ಮೇಳನದ ಪೂರ್ವಭಾವೀ ಸಿದ್ಧತೆಗಳಲ್ಲಿ ಬೃಂದಾವನ ವಾಣಿಯ ಸಂಪಾದಕ ತಂಡದ ಸದಸ್ಯರೆಲ್ಲರೂ ತಮ್ಮನ್ನು ತೊಡಗಿಸಿಕೊಂಡಿರುವುದರಿಂದ ವಾಣಿಯ ಈ ಸಂಚಿಕೆಯಲ್ಲಿ ಬಹಳಷ್ಟು ಅಂಕಣಗಳನ್ನು ಪ್ರಕಟಿಸಲಾಗುತ್ತಿಲ್ಲ. ಕ್ಷಮೆಯಿರಲಿ. ನಿಮ್ಮ ಅನಿಸಿಕೆ, ಸಲಹೆಗಳಿಗೆ ಸದಾ ಸ್ವಾಗತ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

ಮುಂದಿನ ಸಂಚಿಕೆಯಲ್ಲಿ ಮತ್ತೆ ಸಿಗೋಣ.

-ಸರಿತಾ ನವಲಿ.


Copyright © KCO – Brindavana

ಹಿನ್ನೋಟ

## ಪ್ರವಾಸ ಸಂಭ್ರಮ

ಚಂದ್ರಶೇಖರ, ಬೆಂಗಳೂರು

**ಅ**ಲ್ಲಿ ಸಂಭ್ರಮವಿತ್ತು. ತುಂಬಿ ತುಳುಕುವ ಉತ್ಸಾಹವಿತ್ತು. ಆತ್ಮೀಯತೆಯ ಬಿಸುಪಿತ್ತು. ಮುದ್ದುಮಾತಿನ ಕಲರವವಿತ್ತು. ಯುವಕರ ಕಸುವು ಮೇಳೈಸಿತ್ತು. ಲಲನೆಯರ ಲಾಸ್ಯವಿತ್ತು. ಲತಾಂಗಿಯರ ಬಳುಕಿತ್ತು. ಸಂಗೀತವಿತ್ತು. ನಾಟ್ಯವಿತ್ತು. ಹಿರಿಯರ ಗೆಳೆತನವಿತ್ತು. ತಣ್ಣನೆಯ ವಾತಾವರಣವಿತ್ತು. ಮಿಗಿಲಾಗಿ ತಿಲಕವಿಟ್ಟಂತೆ ಕನ್ನಡದ ಕಂಪು ತುಂಬಿತ್ತು. ಹಿಂದಿನ ದಿನ ಸಂಜೆ ಸುರಿದ ಜಿಟಿ ಜಿಟಿ ಮಳೆ ಸುರಿದು ಇಳೆ ತಂಪಾಗಿತ್ತು. ಕೆಂಡದಂಥ ಬಿಸಿಲು ಸೂಸಬೇಕಿದ್ದ ನೇಸರನಿಗೂ ಬೇಸರ ಮೂಡಿ ಮೋಡಗಳ ಕೌದಿ ಹೊದ್ದು ಮಲಗಿದ್ದ!

ಅಂದು ಶನಿವಾರ. 9.7. 2016. ಟೆಕ್ಕಿ ಕುಟುಂಬಗಳಿಗೆ ವಾರದ ಬಿಡುವಿನ ದಿನ. ನ್ಯೂ ಜೆರ್ಸಿ ನಗರದ ಕನ್ನಡ ಸಂಘ ಬೃಂದಾವನ. ಹೆಸರಿಗೆ ತಕ್ಕಂತೆ ಅದರ ಕಾರ್ಯಕ್ರಮ. ಬೃಂದಾವನದಲ್ಲಿ ನಲಿದಾಟ, ಆಟೋಟ, ಊಟ. ಇದು ಸಂಸ್ಥೆಯ ನಿರ್ಧಾರಿತ ವಾರ್ಷಿಕ ಕಾರ್ಯಕ್ರಮ.

ಸಂಸ್ಥೆಯ ಸದಸ್ಯರು ಒಂದೆಡೆ ಸೇರಿ, ಕುಟುಂಬದವರೊಡನೆ ಬೆರೆತು, ಮಿತ್ರರೊಡನೆ ಕೂಡಿ, ಆಟೋಟವಾಡಿ, ಎಲ್ಲರೂ ಸೇರಿ ಊಟ ಮಾಡಿ, ನಕ್ಕು ನಲಿದಾಡಲು ಮೀಸಲಿಟ್ಟ ಒಂದು ದಿನ. ಅದು ಕಿರು ಪ್ರವಾಸ.

ಮಲ್ಲಿಕ್ ಇದನ್ನು ನನಗೆ ಬಹು ಹಿಂದೆ ಹೇಳಿದ್ದರು. ಅದನ್ನು ನೋಡುವ ಭಾಗ್ಯ ಈ ಬಾರಿ ನನ್ನದಾಯಿತು. ನಾನು ನನ್ನ ಹೆಂಡತಿ ಶೈಲಜಾ ಇಂಡಿಯಾದಿಂದ ಈ ಸಮಯದಲ್ಲೇ ನ್ಯೂ ಜೆರ್ಸಿಗೆ ಬಂದಿದ್ದುದು ಕಾಕತಾಳೀಯ. ಮಲ್ಲಿಕ್ ಜೊತೆ ನಾವೂ ಪಾರ್ಸಿಪೆನ್ ಉದ್ಯಾನ ತಲುಪಿದಾಗ ಬೆಳಗಿನ ಹನ್ನೊಂದು ಘಂಟೆ. ಆ ಸಮಯಕ್ಕೆ ಅಲ್ಲಿ ಕೆಲವು ಕಾರ್ಯಕರ್ತರು ಬಂದು ಸೇರಿ ಸಿದ್ಧತೆ ನಡೆಸಿದ್ದರು. ಹನ್ನೆರಡು ಘಂಟೆಯ ವೇಳೆಗೆ ಬಹಳಷ್ಟು ಮಂದಿ ನೆರೆದರು. ಅಂದು ಬೆಂಗಳೂರಿನ ಸೇವಾ ಸಂಸ್ಥೆಯೊಂದಕ್ಕೆ ದೇಣಿಗೆ ನೀಡುವ ಸಲುವಾಗಿ ಐದು ಕಿಲೋಮೀಟರು,ಹತ್ತು ಕಿಲೋಮೀಟರು ದೂರದ ವೇಗದ ಓಟ, ವೇಗದ ನಡಿಗೆ ಕಾರ್ಯಕ್ರಮವಿತ್ತು. ಸಂಸ್ಥೆಯ ಪ್ರತಿಯೊಬ್ಬ ಸದಸ್ಯನೂ ಹತ್ತು ಡಾಲರು ಪ್ರವೇಶ ಶುಲ್ಕ ನೀಡಿ ಭಾಗವಹಿಸಬಹುದಿತ್ತು. ಬಹಳಷ್ಟು ಸದಸ್ಯರು ತಮ್ಮ ಹೆಸರು ನೋಂದಾಯಿಸಿ ಭಾಗವಹಿಸಿದ್ದರು. ಕಿರಿಯರಿಗೆ, ವಯಸ್ಕರಿಗೆ, ಹಿರಿಯರಿಗೆ ಸ್ಪರ್ಧೆಯಲ್ಲಿ ವಿಭಾಗ ಮಾಡಿದ್ದರು. ಓಟ ಮುಗಿಯುವ ಹೊತ್ತಿಗೆ ಊಟ ಬಂದಿತು.

ಅಪರಾಹ್ನ ಒಂದು ಘಂಟೆಯ ಹೊತ್ತಿಗೆ ಸರಿಯಾಗಿ ಮೈಸೂರು ವುಡ್ಲ್ಯಾಂಡ್ಸ್ ಹೋಟೆಲ್ನಿಂದ ಬಂದಿದ್ದ ರುಚಿಕರ ತಿನಿಸುಗಳಾದ ಇಡ್ಲಿ, ವಡೆ, ಪುಳಿಯೋಗರೆ, ಮಸಾಲೆ ದೋಸೆ, ಉತ್ತಪ್ಪ ತಿಂದು, ಮಸಾಲೆ ಮಜ್ಜಿಗೆಯನ್ನು ಇಳಿಸಿ, ಗರಿ ಗರಿ ಮತ್ತು ಸಿಹಿ ಸಿಹಿಯಾದ ಕಲ್ಲಂಗಡಿ ಹಣ್ಣು ತಿಂದು ಎಲ್ಲರೂ ಮತ್ತೆ ಆಟೋಟದಲ್ಲಿ ತೊಡಗಿದರು.

ಪುಟ್ಟ ಮಕ್ಕಳಿಗೆ, ಹಿರಿಯರಿಗೆ ಅದೃಷ್ಟದ ಆಟವಿತ್ತು. ಹಿರಿಯರಿಗೆ ನೆನಪಿನ ಪರೀಕ್ಷೆ ಇತ್ತು. ಮಹಿಳೆಯರಿಗೆ ವೇಗದ ನಡಿಗೆ, ವಾಲಿಬಾಲ್ ಪಂದ್ಯ, ಯುವಕರಿಗಾಗಿ ಕ್ರಿಕೆಟ್ ಮತ್ತು ವಾಲೀಬಾಲ್ ಪಂದ್ಯ ಹಾಗೂ ವೇಗದ ಓಟವಿತ್ತು. ಇಷ್ಟೆಲ್ಲ ಆಟೋಟಗಳು ಮುಗಿವ ಹೊತ್ತಿಗೆ ಸಂಜೆಯಾಗಿತ್ತು. ಬಿಸಿ ಬಿಸಿ ಕಾಫಿ ಕೂಡ ಬಂದಿತು!

ಆಟೋಟವಾಡಿ ದಣಿದ ಮಂದಿ ಕಾಫಿ ಕುಡಿವ ಹೊತ್ತಿಗೆ ಆಯೋಜಕರು ಅಂದಿನ ಕ್ರೀಡೆಯಲ್ಲಿ ಭಾಗವಹಿಸಿ ಗೆದ್ದವರ ಹೆಸರು ಪಟ್ಟಿ ಮಾಡಿದ್ದರು. ಐದು ಘಂಟೆಯ ಹೊತ್ತಿಗೆ ಬಾನಲ್ಲಿ ಮೋಡಗಳು ದಟ್ಟೈಸುತ್ತಿದ್ದವು. ಯಾವುದೇ ಸಮಯದಲ್ಲೂ ಮಳೆ ಸುರಿಯಬಹುದಾದ ವಾತಾವರಣ ಸೃಷ್ಟಿ ಆಯಿತು.

ಕ್ರೀಡೆಯಲ್ಲಿ ಗೆದ್ದವರಿಗೆ ಬಹುಮಾನ ವಿತರಿಸಿ, ಒಂದೆರಡು ಸಿನಿಮಾ ಹಾಡಿಗೆ ಎಲ್ಲರೂ ಹೆಜ್ಜೆ ಹಾಕಿ ಕುಣಿದರು. ತಮಗಾಗಿ ಪಾರ್ಕಿನಲ್ಲಿ ಕಾಯ್ದಿರಿಸಿಕೊಂಡಿದ್ದ, ಕಾರ್ಯಕ್ರಮ ನಡೆದ ಸ್ಥಳವನ್ನು ಎಲ್ಲರೂ ಕೂಡಿ ಸ್ವಚ್ಛ ಮಾಡಿದರು. ಕಸವನ್ನು ಡಬ್ಬಗಳಿಗೆ ತುಂಬಿ, ತಮ್ಮ ಪರಿಕರಗಳನ್ನು ಕಾರಿಗೆ ಹಾಕಿಕೊಂಡು ಎಲ್ಲರೂ ತಮ್ಮ ಮನೆಗಳತ್ತ ತೆರಳಿದರು. ಮುಂದಿನ ವರ್ಷದ ಇಂಥದೇ ಕಾರ್ಯಕ್ರಮಕ್ಕೆ ಎದುರು ನೋಡುತ್ತಾ....ನಡೆದರು.
ಈ ಎಲ್ಲದರ ಹಿಂದೆ ಸುಧೀಂದ್ರ, ಮಲ್ಲಿಕ್ ಪ್ರಸಾದ್, ಅಶೋಕ್ ಕಟ್ಟಿಮನಿ ದಂಪತಿಗಳೂ ಸೇರಿದಂತೆ ಹಲವಾರು ಕಾರ್ಯಕರ್ತರ ಅಪಾರ ಶ್ರಮವಿತ್ತು. ಅದು ಆ ಹೊತ್ತಿಗೆ ಸಾರ್ಥಕವೆನಿಸಿತ್ತು.

- ಚಂದ್ರಶೇಖರ, ಬೆಂಗಳೂರು.




Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



ಲೇಖನ

## ಒಂದು ನಾಡಿನ ಸಂಸ್ಕೃತಿಯಾಗಿದ್ದ ರಾಜ್

ಸರಸ್ವತಿ ಸಕಲ

ನಮ್ಮ ಕಾಲದವರು ಗಂಭೀರವಾಗಿ ಸಿನಿಮಾ ನೋಡಲು ಶುರುಮಾಡುವ ಹೊತ್ತಿಗೆ ರಾಜ್‌ಕುಮಾರ್ ಸಿನಿಮಾ ಮಾಡುವುದ ಬಿಟ್ಟುಬಿಟ್ಟಿದ್ದರು. ಹೀಗಾಗಿ ನನಗೆ 'ಶಬ್ಧವೇದಿ'ಯ ಹೊರತಾಗಿ ಯಾವ ರಾಜ್‌ಕುಮಾರ್ ಚಿತ್ರವನ್ನೂ ಚಿತ್ರಮಂದಿರದಲ್ಲಿ ನೋಡಿದ ನೆನಪಿಲ್ಲ. ಆದರೆ ಚಿಕ್ಕಂದಿನಿಂದಲೇ ಮನೆಯಲ್ಲಿ ಹೆಚ್ಚು ಕಡಿಮೆ ವಾರಕ್ಕೊಮ್ಮೆಯಾದರೂ ಏನನ್ನೋ ಉದಾಹರಿಸುವಾಗ ಇವರ ಹೆಸರು ಹಿರಿಯರ ಮಾತುಗಳಲ್ಲಿ ಬಂದೇ ಬರುತ್ತಿತ್ತು. ಹೀಗಾಗಿ ರಾಜ್‌ಕುಮಾರ್, ನನ್ನ ಸ್ಮೃತಿಪಟಲದಲ್ಲಿ ಒಬ್ಬ ನಟನಾಗಿ ರೂಪಗೊಳ್ಳುವ ಮೊದಲೇ ಒಬ್ಬ ಉದಾತ್ತ ಮನುಷ್ಯನಾಗಿ, ಒಂದು ಪರಿಪೂರ್ಣ ವ್ಯಕ್ತಿತ್ವವಾಗಿ, ಒಂದು ನಾಡಿನ ಸಂಸ್ಕೃತಿಯಾಗಿ ರೂಪಗೊಂಡಿದ್ದರು.

ಉಪೇಂದ್ರ ನಿರ್ದೇಶನದ 'ಓಂ' ಸಿನಿಮಾದಲ್ಲಿ 'ಓ ಗುಲಾಬಿಯೇ' ಎಂಬ ಹಾಡು ಬರುತ್ತದೆ. ಚಿತ್ರದ ಆ ಘಟ್ಟದಲ್ಲಿ ನಾಯಕಿಯ ತುಮುಲಗಳನ್ನೂ, ನಾಯಕನ ಮನಃಸ್ಥಿತಿಯನ್ನೂ ಸಮರ್ಥವಾಗಿ ಸಹೃದಯರಿಗೆ ಒಂದೇ ಹಾಡಿನಲ್ಲಿ ದಾಟಿಸಬಲ್ಲ ಶಕ್ತಿ ರಾಜ್‌ರ ಧ್ವನಿಯಲ್ಲಿತ್ತು. ಅವರ ಆಳವಾದ ಅಂತಃಕರಣದ ದನಿ ಅವರ ಅಭಿನಯಕ್ಕೆ, ಹಾಡುಗಳಿಗೆ ಒಂದು ವಿಶಿಷ್ಟವಾದ ಘನತೆಯನ್ನು ತಂದುಕೊಟ್ಟಿದ್ದು ಸುಳ್ಳಲ್ಲ.

ಇನ್ನು ಟೀವಿಯಲ್ಲಿ ಚಾನಲ್ ಬದಲಿಸುವಾಗ ರಾಜ್ ಅಭಿನಯದ ಸಿನಿಮಾ ಅಥವಾ ಹಾಡು ಬಂದರೆ ಬೇರೆ ಯಾವ ಕಾರ್ಯಕ್ರಮವನ್ನು ಬೇಕಾದರೂ ತ್ಯಾಗ ಮಾಡಿ ಅವರ ಚಿತ್ರವನ್ನೇ ನೋಡುತ್ತ ಕುಳಿತುಬಿಡಬಹುದು. ಯಾವ ಕಾರಣಕ್ಕೂ ಕ್ಲೀಷೆಯೆನಿಸದ, ಗದ್ದಲವೆನಿಸದ, ಅತಿರೇಕವೆನಿಸದ ಅವರ ಅಭಿನಯ ತಣ್ಣನೆಯ ನದಿಯಂತೆ ಟೀವಿ ಪರದೆಯಿಂದ ನಮ್ಮ ಮನಸ್ಸಿಗೆ ಹರಿಯುತ್ತಿರುತ್ತದೆ.

"ಇನ್ನೂ ಹತ್ತಿರ ಹತ್ತಿರ ಬರುವೆಯಾ" ಎಂದು ನಾಯಕಿಯನ್ನು ನೋಡಿ ಹಾಡುತ್ತಲೇ ಆ ಹಾಡಿನ ಭಾವಕ್ಕೆ ತದ್ವಿರುದ್ಧವಾಗಿ ಅಭಿನಯಿಸಬಲ್ಲ ರಾಜ್‌ಕುಮಾರ್ ಅದೇ ಹೊತ್ತಿನಲ್ಲಿ ಕಣ್ಣಲ್ಲಿ ಹರೆಯದ ಮಿಂಚನ್ನು ತುಳುಕಿಸಲೂ ಬಲ್ಲರು. 'ಕವಿರತ್ನ ಕಾಳಿದಾಸ'ದಲ್ಲಿ "ಏ ಮಂಕ್ರಪ್ಪ, ನಾ ಕುಂತ್ರೆ ಕುರುಬ ನಿಂತ್ರೆ ಕಿರುಬ" ಎನ್ನುವ ಹಳ್ಳಿಯ ಹೈದನನ್ನೂ, 'ಬಂಗಾರದ ಪಂಜರ'ದಲ್ಲಿ ತಮ್ಮ ಮುಗ್ಧ ಕಣ್ಣುಗಳಿಂದಲೇ ನಮ್ಮ ಕಣ್ಣಂಚಲ್ಲೂ ನೀರು ತರಿಸಬಲ್ಲ ಆ ಅಪರೂಪದ ಕಲಾವಿದನನ್ನೂ, 'ಒಡಹುಟ್ಟಿದವರು' ಸಿನಿಮಾದಲ್ಲಿ ತನ್ನದೆಲ್ಲವನ್ನೂ ತಮ್ಮನಿಗೆ ಅವನ ಹೆಂಡತಿಗೆ ಬಿಟ್ಟು ಹೋಗುವ ಮಹಾ ತ್ಯಾಗಿಯನ್ನೂ, 'ನಿನ್ನಂಥ ಮಗಳು ಇಲ್ಲ' ಎನ್ನುತ್ತ ಮಗಳೊಂದಿಗೆ ಹೆಜ್ಜೆಹಾಕುವ ವಾತ್ಸಲ್ಯಮಯಿ ತಂದೆಯನ್ನೂ ಮೆಚ್ಚದೇ ಇರಲು ಹೇಗೆ ಸಾಧ್ಯ.

ಇಂಥ ಸಾವಿರಾರು ಬಿಂಬಗಳಲ್ಲಿ ಹಂಚಿಹೋಗಿರುವ ರಾಜ್‌ರ ವ್ಯಕ್ತಿತ್ವ ಅವರ ಪಾತ್ರಗಳು ಹೊರಸೂಸುವ ಬದುಕಿನ ವಿವಿಧ ಬಣ್ಣಗಳನ್ನು ಅತ್ಯಂತ ಪ್ರಬುದ್ಧವಾಗಿ ನಿರ್ವಹಿಸಿತ್ತು.



ಅದಕ್ಕಾಗಿಯೇ ನಮಗೆ ಎಂಟೀವಿ- ವಿ ಚ್ಯಾನಲ್‌ಗಳ ಅಬ್ಬರದ ನಡುವೆಯೂ ಶಾಂತ ಸಮುದ್ರದಂಥ, ಉದಾತ್ತ ಜೀವನಪ್ರೀತಿಯ ರಾಜ್ ಚಿತ್ರಗಳು ಸೆಳೆಯುತ್ತವೆ. ಯಾವುದೇ ವಿವಾದಕ್ಕೆ ಸಿಲುಕದ, ರಾಜಕೀಯ ಪ್ರವೇಶಿಸುವ ಬಗ್ಗೆ ನಿಖರ ನಿರ್ಧಾರ ತಳೆದ, ಅಂಥ ಮೇರುನಟನಾಗಿದ್ದರೂ ಒಂದಿನಿತೂ ಗರ್ವವಿಲ್ಲದೇ ಶುಭ್ರ ಬಿಳಿಯ ವಸ್ತ್ರದಲ್ಲಿ ಮುಗುಳ್ನಗುತ್ತಿದ್ದ ಈ ಸ್ಫುರದ್ರೂಪಿಯಲ್ಲಿ ಒಂದಲ್ಲ ಒಂದು ಬಾರಿ ನನ್ನ ತಂದೆಯನ್ನೂ, ಅಣ್ಣನನ್ನೂ, ಚಿಕ್ಕಪ್ಪನನ್ನೂ, ಅಕ್ಕರೆಯ ಮಾಮನನ್ನೂ ಕಂಡಿದ್ದೇನೆ. ಅದಕ್ಕಾಗಿ ಅವರಿಗೆ ಕೃತಜ್ಞಳಾಗಿದ್ದೇನೆ ಕೂಡ.

ನಟನೊಬ್ಬ ಕೇವಲ ನಟನಾಗಿ ಉಳಿಯದೇ ಒಂದು ನೆಲದ ಸಾಂಸ್ಕೃತಿಕ ರಾಯಭಾರಿಯಾಗಿ ಬೆಳೆದ ಪರಿ ಅಪೂರ್ವವಾದದ್ದು. ಅವರ ಹಾಡುಗಳಷ್ಟೇ ಅಲ್ಲದೇ ಬೇರೆ ಬೇರೆ ಸಿನಿಮಾಗಳಲ್ಲಿನ ಅವರ ಸಂಭಾಷಣೆ ಕೂಡ ಗಾದೆಮಾತುಗಳಂತೆ ಉಪಯೋಗಿಸಲ್ಪಡುತ್ತಿರುವುದು ಅವರ ಜನಪ್ರಿಯತೆಗೆ ಸಾಕ್ಷಿ. ಯಾವತ್ತೂ ತೆರೆಯ ಮೇಲೆ ಕುಡಿಯದ, ಸಿಗರೇಟು ಹೊಗೆ ಬಿಡದ, ಹೆಣ್ಣಿನ ಬಗ್ಗೆ ಅಗೌರವ ತೋರದ ಈ ನಟನನ್ನು, ಆ ಮೂಲಕ ಮಾಧ್ಯಮವೆಂದರೆ ಅದು ಜನಸಾಮಾನ್ಯರ ಕಲಿಕೆಯ ಕೇಂದ್ರವೆಂದು ಪರೋಕ್ಷವಾಗಿ ತೋರಿಸಿಕೊಟ್ಟ ಈ ಅನನ್ಯ ತಾರೆಯನ್ನೂ ಗೌರಿವಿಸದೇ ಇರಲು ಹೇಗೆ ಸಾಧ್ಯ ಹೇಳಿ?


Copyright © KCO – Brindavana

ಸಂಚಿಕೆ
೦೯
ಸೆಪ್ಟೆಂಬರ್ ೨೦೧೯

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಬಾರ್ಸಲೋನಾ: ಒಂದು ಊರಿನ ಜೀವ



### ಪ್ರವಾಸ ಕಥನ

ಕಾವ್ಯಾ ಕಡಮೆ ನಾಗರಕಟ್ಟೆ

**ಒಂ**ದು ಊರಿನ ಜೀವ ನಿಜಕ್ಕೂ ಎಲ್ಲಿ ಅಡಕವಾಗಿರುತ್ತದೆ? ಎಂದೂ ಮುಗಿಯದಂತೆ ಕಾಣುವ ಆ ಊರಿನ ಉದ್ದಾನುದ್ದ ರಸ್ತೆಗಳಲ್ಲೇ? ಕೈಯಲ್ಲೊಂದು ನಕಾಶೆ ಹಿಡಿದುಕೊಂಡು ಅಹೋರಾತ್ರಿ ದೇಶ-ವಿದೇಶಗಳಿಂದ ನಿದ್ದೆಗಣ್ಣಲ್ಲೇ ಬಂದಿಳಿವ ಪ್ರವಾಸಿಗರ ಹುಮ್ಮಸ್ಸಿನಲ್ಲೇ? ಅದೇ ಪ್ರವಾಸಿಗರು ತಮ್ಮ ಸ್ಮಾರ್ಟುಫೋನುಗಳಲ್ಲಿ ಆವೇಶ ಬಂದವರಂತೆ ತೆಗೆದುಕೊಂಡ ಸಾವಿರಾರು ಛಾಯಾಚಿತ್ರಗಳಲ್ಲೇ? ಅಥವಾ ಯಾರು ಬಂದರೂ ಹೋದರೂ ತನಗೆ ಸಂಬಂಧವೇ ಇಲ್ಲ ಅನ್ನುವ ಹಾಗೆ ರಸ್ತೆ ಬದಿಯ ಮನೆಯೊಂದರ ಬಾಲ್ಕನಿಯಲ್ಲಿ ನಿತ್ಯವೂ ನಿರಮ್ಮಳ ಒಣಗುವ ಬಟ್ಟೆಗಳ ಇನ್ನೂ ಆರದ ನೀರ ಪಸೆಯಲ್ಲೇ?

ಈ ಬಾರಿ ಸ್ಪೇನ್ ದೇಶದ ಬಾರ್ಸಲೋನಾ ಪಟ್ಟಣಕ್ಕೆ ಹೋದಾಗ ಈ ಪ್ರಶ್ನೆಯನ್ನು ಬೇರೆ ಬೇರೆ ಹೊತ್ತಿನಲ್ಲಿ, ಆ ನಗರದ ಬೇರೆ ಬೇರೆ ಬಿಂದುಗಳಲ್ಲಿ ನಿಂತು ಕೇಳಿಕೊಂಡೆ. ಸಾವಿರಾರು ವರ್ಷಗಳ ಹಿಂದೆ ಕಣ್ತೆರೆದ ಈ ಪುರಾತನ ಪಟ್ಟಣದ ಒಳಜೀವವನ್ನು ಒಂದು ವಾರದ ಮಟ್ಟಿಗೆ ಪ್ರವಾಸಿಗಳಾಗಿ ಹೋದ ನಾನು ಹೇಗೆ ತಾನೇ ಸ್ಪರ್ಶಿಸಲು ಸಾಧ್ಯ? ಕೊನೆಗೆ ಆ ಊರು ತಡವಿಲ್ಲದೇ ದಯಪಾಲಿಸಿದ ಕಂಪನವನ್ನಷ್ಟೇ ನನ್ನ ಉಡಿಯಲ್ಲಿ ಹಾಕಿಕೊಂಡು ಬರಲು ನನಗೆ ಸಾಧ್ಯವಾಯಿತು.

ಬಾರ್ಸಲೋನಾ ಶಹರ ಕುಳಿತಿರುವುದು ಮೆಡಿಟರೇನಿಯನ್ ಸಮುದ್ರದ ದಂಡೆಯ ಮೇಲೆ. ಹೀಗಾಗಿ ಕಡಲ ತೀರದ ಊರಿನ ಮೊರೆತ, ಉಪ್ಪು ನೀರಿನ ಹವೆ ಇಲ್ಲಿ ಭರಪೂರ ಲಭ್ಯ. ನಾವಲ್ಲಿ ಹೋಗಿದ್ದು ಚಳಿಗಾಲದಲ್ಲಾಗಿದ್ದರೂ ವಾತಾವರಣದಲ್ಲಿ ಕೊರೆಯುವ ಚಳಿಯೇನೂ ಇರಲಿಲ್ಲ. ಮುಖ್ಯವಾಗಿ



*ಅಂತೋನಿ ಗೌದಿ ವಾಸ್ತುಶಿಲ್ಪದ 'ಕಾಸಾ ಮಿಲಾ'*

ಸ್ಪಾನಿಷ್ ಮತ್ತು ಕ್ಯಾಟಲೋನಿಯನ್ ಭಾಷೆಗಳಲ್ಲಿ ವ್ಯವಹರಿಸುವ ಇಲ್ಲಿನ ಜನ ಪ್ರವಾಸಿಗರ ಅನುಕೂಲಕ್ಕೆ ತಕ್ಕಂತೆ ಸ್ವಲ್ಪ ಮಟ್ಟಿನ ಇಂಗ್ಲೀಷನ್ನೂ ಮಾತನಾಡಬಲ್ಲರು. ಅವರಿಗೆ ಫುಟ್‌ಬಾಲ್ ಆಟದ ಕುರಿತು ಅದೆಷ್ಟು ಹುಚ್ಚೆಂದರೆ ತಮ್ಮ ತಂಡ ಗೆದ್ದ ದಿನ ಇಡೀ ಶಹರವೇ ಮೊಗದ ಮೇಲೆ ನಗೆಯ ಕಳೆ ಹೊತ್ತು ನಡೆಯುತ್ತಿರುತ್ತದೆ. ಆ ದಿನ ನಗರದ ಮುಖ್ಯರಸ್ತೆ 'ಲಾ ರಾಂಬ್ಲಾ'ದಲ್ಲಿ ಭರ್ಜರಿ ಸಂತೋಷಕೂಟಗಳೂ ನಡೆದಿರುತ್ತವೆ.

ಬಾರ್ಸಲೋನಾ ಮುಖ್ಯವಾಗಿ ಪ್ರವಾಸೀ ತಾಣ. ಇಲ್ಲಿ ದಿನವೂ ಸಾವಿರಾರು ಪ್ರವಾಸಿಗರು ಊರು ನೋಡಲೆಂದೇ ಬಂದಿಳಿಯುತ್ತಾರೆ. ಅದಕ್ಕೆ ಕಾರಣವೂ ಇಲ್ಲದಿಲ್ಲ. ಇಲ್ಲಿ ಒಂದೇ ಚೌಕದಲ್ಲಿ ನಮಗೆ ಎರಡೂವರೆ ಸಾವಿರ ವರ್ಷಗಳ ಹಿಂದೆ ರೋಮನ್ನರು ಕಟ್ಟಿದ ಪಟ್ಟಣದ



ಮುಂದಿನ ಪುಟಕ್ಕೆ



Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

# ಬಾರ್ಸಲೋನಾ: ಒಂದು ಊರಿನ ಜೀವ

## ಪ್ರವಾಸ ಕಥನ

ಪಳಿಯುಳಿಕೆಗಳೂ, ಮೂರನೇ ಶತಮಾನದ ಕ್ಯಾಥಾಡ್ರೆಲ್‌ಗಳೂ, ಹದಿನಾಲ್ಕನೇ ಶತಮಾನದ ಇಮಾರತುಗಳೂ ಮತ್ತು ಕಳೆದ ಕೆಲವೇ ವರ್ಷಗಳಲ್ಲಿ ಹೆಚ್ಚಿಕೊಂಡ ಕಾಫೀ ಕೆಫೆಗಳೂ ಶ್ರಮವಿಲ್ಲದೇ ಕಾಣಸಿಗುವವು. ವಿಶೇಷವೆಂದರೆ ಈ ಭೂತ- ವರ್ತಮಾನದ ಮಿಶ್ರಣ ಯಾರನ್ನೂ ಕಿರಿಕಿರಿಗೊಳಿಸದೇ ಒಂದಕ್ಕೊಂದು ಪೂರಕವಾಗಿವೆ, ಆ ಕಾರಣಕ್ಕಾಗಿಯೇ ನಗರದ ಅಂದ ಹೆಚ್ಚಿಸಿವೆ.



*'ಲಾ ಸಗ್ರಾದಾ ಫ್ಯಾಮೀಲಿಯಾ' ದೇಗುಲ*

ಇಲ್ಲಿ ನಗರದ ಒಂದು ಜಾಗದಿಂದ ಇನ್ನೊಂದಕ್ಕೆ ಸಾಗಲು ಜನ ಬಹುತೇಕವಾಗಿ ಮೆಟ್ರೋ ರೈಲನ್ನೇ ಬಳಸುವುದ ಕಂಡೆ. ಜೊತೆಗೆ ಬಸ್ಸುಗಳೂ, ಟ್ಯಾಕ್ಸಿಗಳೂ ಲಭ್ಯವಿದ್ದರೂ ಅವು ಎರಡನೆಯ ಆಯ್ಕೆಯೇ. ಮೇಲೆ ಚೆನ್ನಾದ ಸಿಟಿ ಇದ್ದರೂ ನೆಲದ ಒಳ ಸುರಂಗದಲ್ಲಿ ವೇಗವಾಗಿ ಚಲಿಸುವ ಮೆಟ್ರೋಗಳೇ ಈ ಊರಿನ ಜೀವನಾಡಿ. ಈ ಮೆಟ್ರೋ ಸುರಂಗದ ಸರೀ ಮೇಲೆ ಬರುವ ಮನೆಗಳಿಗೆ ಬಾಡಿಗೆಯೂ ತುಸು ಕಡಿಮೆ ಎನ್ನುವುದು ಇನ್ನೊಂದು ಸ್ವಾರಸ್ಯಕರ ವಿಚಾರ.

ನಾವಲ್ಲಿ ಮೊದಲು ಹೋದದ್ದು 'ಲಾ ಸಗ್ರಾದಾ ಫ್ಯಾಮಿಲಿಯಾ' ಎಂಬ ವಿಶ್ವಪ್ರಸಿದ್ಧ ದೇವಾಲಯಕ್ಕೆ. ಅಂಥೋನಿ ಗೌದಿ ಎಂಬ ಶ್ರೇಷ್ಠ ವಾಸ್ತುಶಿಲ್ಪಿಯ ಮೇರು ಕೃತಿಯೆಂದೇ ಪರಿಗಣಿಸಲಾಗುವ ಈ ದೇವಾಲಯದಲ್ಲಿ ಕ್ರಿಸ್ತನ ಬದುಕಿನ ನಾನಾ ಘಟನೆಗಳನ್ನು ಕಲ್ಲಿನಲ್ಲಿಯೇ ಕಲಾತ್ಮಕವಾಗಿ ಕೆತ್ತಲಾಗಿದೆ. ಈ ಕಟ್ಟಡದ ಕುರಿತು ಇನ್ನೊಂದು ವಿಶಿಷ್ಟ ಸಂಗತಿಯೆಂದರೆ ಕಳೆದ ನೂರಾಮೂವತ್ನಾಲ್ಕು ವರ್ಷಗಳಿಂದಲೂ ಈ ಕಟ್ಟಡ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ ಎಂಬುದು. ಎಲ್ಲ ಸರಿಹೋದರೆ ಈ ಕಟ್ಟಡ 2026ರಲ್ಲಿ ಕಟ್ಟಿ ಮುಗಿಯುತ್ತದಂತೆ. ಮುಖ್ಯವಾಸ್ತುಶಿಲ್ಪಿ ಅಂಥೋನಿ ಗೌದಿ 1926ರಲ್ಲೇ ವಿಧಿವಶರಾದರೂ ಅವರ ಯೋಜನೆಯನ್ನೇ ಇಂದಿನ ವಾಸ್ತುಶಿಲ್ಪಿಗಳ ತಂಡ ಕಾರ್ಯರೂಪಕ್ಕೆ ತರುತ್ತಿದೆ.

ಆದರೆ ಕಟ್ಟಡ ಕಾರ್ಯದಿಂದ ಈ ದೇಗುಲಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಗೇನೂ ಕಡಿಮೆ ಬಿದ್ದಿಲ್ಲ. ಪ್ರತೀ ವರ್ಷ ಜಗತ್ತಿನ ಮೂಲೆಮೂಲೆಗಳಿಂದ ಸಾವಿರಾರು ಜನ ಸಾಗರ ಈ ದೇಗುಲದ ಅತ್ಯುನ್ನತ ವಾಸ್ತುಶಿಲ್ಪವನ್ನು ಕಣ್ಣುತುಂಬಿಕೊಳ್ಳಲೆಂದೇ ಇಲ್ಲಿಗೆ ಹರಿದು ಬರುತ್ತಾರೆ. ಗೌದಿ ವಾಸ್ತುಶಿಲ್ಪದ ವಿಶೇಷತೆಯೆಂದರೆ ಅವರು ಯೋಜನೆ ಹಾಕಿದ ಕಟ್ಟಡಗಳು ಚಚ್ಚೌಕವಾಗಿರದೇ ತಿರುವು-ಮುರುವಾಗಿರುತ್ತವೆ. ಸಾಮಾನ್ಯವಾಗಿ ಎಲ್ಲಿಯೂ ಚೂಪು ಅಂಚುಗಳೂ, ಕೋನಗಳೂ ಕಾಣದೇ ಕಟ್ಟಡದ ತುದಿಗಳೆಲ್ಲ ಗೋಲಕ್ಕಿರುತ್ತವೆ. "ನಾನು ನಿಸರ್ಗದ ನಿಯಮಗಳ ಆರಾಧಕ. ನಿಸರ್ಗ ಯಾವುದನ್ನೂ ಚೂಪಾಗಿ, ಗೆರೆ ಕೊರೆದಂತೆ ರಚಿಸುವುದಿಲ್ಲ. ಹೀಗಾಗಿ ನನ್ನ ಕೃತಿಗಳಲ್ಲೂ ಚೂಪು ಅಂಚುಗಳಿಲ್ಲ" ಅಂತ ಒಂದು ಸಂದರ್ಶನದಲ್ಲಿ ಹೇಳಿಕೊಂಡ ಗೌದಿ, ಇದೇ ಊರಿನಲ್ಲಿ 'ಕಾಸಾ ಮಿಲಾ', 'ಕಾಸಾ ಬಟ್ಲು'ವಿನಂತಹ ಆಧುನಿಕ ಶಿಲ್ಪಗಳನ್ನೂ ರಚಿಸಿದ್ದಾರೆ.

ಬಾರ್ಸಲೋನಾ ನಗರದಲ್ಲಿ ಹತ್ತಾರು ಮಹತ್ವದ ಮ್ಯೂಸಿಯಂಗಳಿವೆ. ಅವುಗಳಲ್ಲಿ 'ರಾಷ್ಟ್ರೀಯ ಕಲಾ ಮ್ಯೂಸಿಯಂ' ಪ್ರಮುಖವಾದುದು. ರೋಮನ್ನರ ಕಾಲದಿಂದ ಶುರುವಾಗಿ ಇಂದಿನ ಕಲಾವಿದ್ಯಾರ್ಥಿಗಳ ಚಿತ್ರಕಲೆಯ ತನಕ ಇಲ್ಲಿ ಚಿತ್ರ ಪ್ರದರ್ಶನವಿದೆ. ಸೂಕ್ಷ್ಮವಾಗಿ ಗಮನಿಸಿದರೆ ಸ್ಪೇನ್ ದೇಶದ ಸಾವಿರ ವರ್ಷಗಳ ಕಲಾ ಇತಿಹಾಸ ಈ ಮ್ಯೂಸಿಯಂನಲ್ಲಿ ನಮ್ಮ ಮುಂದೆ ಅನಾವರಣಗೊಳ್ಳುತ್ತದೆ. ಅಲ್ಲದೇ ಈ ಕಟ್ಟಡದ ತಾರಸಿ ಹತ್ತಿ ನೋಡಿದರೆ ಇಡೀ ಬಾರ್ಸಲೋನಾ ಶಹರದ ಮನೋಹರ ನೋಟ ಕಾಣಸಿಗುವುದು.

ಮುಂದಿನ ಪುಟಕ್ಕೆ


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಬಾರ್ಸಲೋನಾ: ಒಂದು ಊರಿನ ಜೀವ

### ಪ್ರವಾಸ ಕಥನ

ಇನ್ನು ನಗರದ ಹೃದಯಭಾಗದಲ್ಲಿರುವ 'ಲಾ ರಾಂಬ್ಲಾ' ರಸ್ತೆಯ ಕುರಿತು ಬರೆಯದೇ ಇರುವುದು ಹೇಗೆ? ಸುಪ್ರಸಿದ್ಧ ನಾಟಕಕಾರ ಲೋರ್ಕಾ ಈ ರಸ್ತೆಯ ಕುರಿತು "ಇದೊಂದು ಮುಗಿಯದ ಬೀದಿ" ಅಂತ ಕೊಂಡಾಡಿದ್ದರಂತೆ. ಆಶ್ಚರ್ಯವೆಂದರೆ ಲಾ ರಾಂಬ್ಲಾದಲ್ಲಿ ಓಡಾಡುವಾಗ ಲೋರ್ಕಾ ಹೇಳಿದ ಆ ಮಾತು ಯಥಾವತ್ತಾಗಿ ದರ್ಶನವಾಗುವುದು ಸುಳ್ಳಲ್ಲ. ಸುಮಾರು ಒಂದೂವರೆ ಕಿಲೋಮೀಟರ್ ಉದ್ದಕ್ಕೂ ಹರಡಿಕೊಂಡಿರುವ ಈ ಬೀದಿಯ ಇಕ್ಕೆಲಗಳಲ್ಲಿ ಪ್ರವಾಸಿಗರಿಗೆಂದೇ ಹೇಳಿಮಾಡಿಸಿದ ಹೊಟೇಲುಗಳೂ, ಗಿಫ್ಟ ಅಂಗಡಿಗಳೂ, ಅವುಗಳಲ್ಲಿ ತೂಗಾಡುವ 'ಮೇಡ್ ಇನ್ ಚೈನಾ' ಕೀಚೈನುಗಳೂ ಭರಪೂರ ಕಾಣಲು ಸಿಗುವವು. ಇಲ್ಲೇ ನಗರದ ಬಹುದೊಡ್ಡ ಮಾರುಕಟ್ಟೆ 'ಲಾ ಬೊಕರಿಯಾ' ಕೂಡ ಇರುವುದು.

ಆದರೆ ನಿಜಕ್ಕೂ ಈ ಊರಿನ ನಾಡಿಮಿಡಿತ ಹಿಡಿಯುವ ಮನಸ್ಸಿದ್ದರೆ ಮುಖ್ಯರಸ್ತೆ ಬಿಟ್ಟು ಒಳದಾರಿಯಲ್ಲಿ ಸಾಗಬೇಕು. 'ಲಾ ರಾಂಬ್ಲಾ' ಮುಖ್ಯರಸ್ತೆಯ ಇಕ್ಕೆಲಗಳಲ್ಲಿ ಯಾವುದೇ ಬೀದಿ ಹೊಕ್ಕರೂ ನಮಗೆ ತಳುಕು-ಬಳುಕಿಲ್ಲದ ಬೇರೆಯದೇ ದೃಶ್ಯಗಳು ಕಾಣಲು ಸಿಕ್ಕವು. ನೂರಾರು ವರ್ಷಗಳಷ್ಟು ಹಳೆಯ ಕಲ್ಲಿನ ಮನೆಗಳು,'ಗಾಥಿಕ್ ವೃತ್ತ'ದಲ್ಲಿ ಎಲ್ಲೆಂದರಲ್ಲಿ ಸ್ವಚ್ಛಂದವಾಗಿ ಹಾರಾಡಿಕೊಂಡು ಊರಿನ ಘನತೆ ಹೆಚ್ಚಿಸುವ ಪಾರಿವಾಳಗಳು, ಪುಟ್ಟ ಪುಟ್ಟ ಬಾಲ್ಕನಿಗಳಲ್ಲಿ ಬಟ್ಟೆಗಳನ್ನು ಹರವಿಹಾಕುತ್ತ ಪ್ರವಾಸಿಗರ ಕಡೆಗೆ ಒಂದು ನಮೂನೆ ಉದಾಸೀನವಾಗಿಯೇ ಕಣ್ಣು ಹಾಯಿಸುವ ಹೆಂಗಸರು, ಎಲ್ಲೆಂದರಲ್ಲಿ ಸಣ್ಣದೊಂದು ಜಮಖಾನೆ ಹಾಸಿಕೊಂಡು ತಾದಾತ್ಮ್ಯದಲ್ಲಿ ವಾದ್ಯ ನುಡಿಸಿ ಆವರಣದ ಸೌಂದರ್ಯ ಹೆಚ್ಚಿಸುವ ಸಂಗೀತಗಾರರು.. ಇವರೆಲ್ಲ ಈ ಪಟ್ಟಣದ ಜೀವಂತ ಸ್ವತ್ತುಗಳು. ಅಲ್ಲದೇ ಬಾರ್ಸಲೋನಾ, ಜಗತ್ತಿನ ಎಲ್ಲಾ ಕಲಾ ಪ್ರೇಮಿಗಳ ಕಣ್ಮಣಿ ಪಾಬ್ಲೋ ಪಿಕಾಸೊ ತನ್ನ ಎಳೆವೆಯ ದಿನಗಳಲ್ಲಿ ಸಮಯ ಕಳೆದ ಊರು. ತನ್ನ ಹದಿಹರೆಯದಲ್ಲಿ ಪಿಕಾಸೊ ಇಲ್ಲಿದ್ದು ತನ್ನ ಮೊದಮೊದಲ ಪೇಂಟಿಂಗುಗಳಲ್ಲಿ ತೊಡಗಿಕೊಂಡಿದ್ದ. ಜಗತ್ತಿನಲ್ಲಿಯೇ ಅತಿದೊಡ್ಡ ಪಿಕಾಸೊ ಪೇಂಟಿಂಗುಗಳ ಸಂಗ್ರಹವಿರುವ 'ಪಿಕಾಸೋ ಮ್ಯೂಸಿಯಂ'ನಲ್ಲಿ ಚಿತ್ರಗಳ ಮುಂದೆ ಮೈಮರೆಯುತ್ತ, ಅವನು ಕಾಫಿ ಕುಡಿಯುತ್ತಿದ್ದ ಕೆಫೆಯಲ್ಲೇ ಧನ್ಯತೆಯಿಂದ ಕಾಫಿ ಕುಡಿಯುತ್ತಾ, ಜಗತ್ತು ಕಂಡ ಅಂಥ ಶ್ರೇಷ್ಠ ಕಲಾವಿದ ಓಡಾಡಿದ ಬೀದಿಗಳಲ್ಲಿ ತಿರುಗಾಡುವುದೇ ಒಂದು ರೋಮಾಂಚನ.

ಅಲ್ಲಿನ ಸಾಂಪ್ರದಾಯಿಕ ತಿನಿಸುಗಳಾಗ 'ಪಯೆಯಾ' ಮತ್ತು 'ಕ್ರೆಮ್ ಕೆಟಲಾನಾ'ಗಳ ರುಚಿ ಮರೆಯಲಸಾಧ್ಯ. ಅನ್ನದ ಜೊತೆಗೆ ಎಲ್ಲ ಬಗೆಯ ತರಕಾರಿಗಳನ್ನೂ, ಇಷ್ಟವಿದ್ದವರಿಗೆ ವಿವಿಧ ಬಗೆಯ ಮೀನನ್ನೂ ಬೆರೆಸಿ ತಟ್ಟೆಯಲ್ಲಿಯೇ ಬೇಯಿಸಿ ಸುಡುಸುಡುವಾಗಲೇ ಮುಂದೆ ತಂದಿಡುವ 'ಪಯೆಯಾ' ಕಾಣಲೆಷ್ಟು ಚೆನ್ನವೋ ತಿನ್ನಲೂ ಅಷ್ಟೇ ರುಚಿ. ಇನ್ನು ಹಾಲಿನ ಕೆನೆಯಿಂದ ತಯಾರಿಸುವ ಸಿಹಿ ತಿಂಡಿ 'ಕ್ರೆಮ್ ಕೆಟಲಾನಾ' ಕುರಿತಾಗಿ ಕೂಡ ಈ ಮಾತು ಸತ್ಯ.



*ಸಿಹಿತಿಂಡಿ 'ಕ್ರೆಮ್ ಕ್ಯಾಟಲಾನಾ'*

ಕೊನೆಯ ದಿನ ನಮ್ಮ ಹೊಟೇಲಿನಿಂದ ಮರಳುವಾಗ ರಸ್ತೆಯ ಪಕ್ಕ ಕಾಲುದಾರಿಯಲ್ಲಿ ಸಾಲು ಸಾಲು ಕಿತ್ತಲೆಯ ಮರಗಳು ಹಣ್ಣು ತುಂಬಿ ನಿಂತಿದ್ದನ್ನು ಕಂಡೆ. ಅಲ್ಲೇ ಉದುರಿದ ಎಲೆಗಳನ್ನು ಸ್ವಚ್ಛ ಮಾಡುತ್ತ ಕೂತ ಮಾಲಿಗೆ ನನ್ನ ಹರುಕು-ಮುರುಕು ಸ್ಪಾನಿಶ್ ಭಾಷೆಯಲ್ಲಿ ತೊದಲುತ್ತ ಕೇಳಿದೆ- "ಹೀಗೆ ಫೂಟ್‌ಪಾತಿನ ಮೇಲೆ ಮರಗಳಿದ್ದರೆ ಯಾರೂ ಹಣ್ಣು ಕೀಳುವುದಿಲ್ಲವೇ?" ಅಂತ. ಅದಕ್ಕೆ ಅವನು ಮಾರ್ಮಿಕವಾಗಿ ನಗುತ್ತ "ಸಾಧ್ಯವಾದರೆ ಕಿತ್ತುಕೋ ನೋಡೋಣ" ಅಂದ.

ಅರೇ, ಹೌದು. ಆ ಕಿತ್ತಲೆಯ ಮರಗಳು ಗಿಡ್ಡವಾಗಿ ಕಂಡರೂ ಅಲ್ಲಿನ ಒಂದು ಹಣ್ಣೂ ಕೈಗೆಟಕುವಂತಿರಲಿಲ್ಲ. ಇಡೀ ಊರಿನ ಉಸಿರೇ ತಮ್ಮಲ್ಲಿದೆಯೇನೋ ಎಂಬಂತೆ ಹೆಮ್ಮೆಯಿಂದ ಆ ಕಿತ್ತಲೆಗಳು ಅತೀ ಎತ್ತರದಲಿ ಜೀವ ತುಂಬಿ ನಿಂತಿದ್ದವು.

###

ಛಾಯಾಚಿತ್ರಗಳು: ಸಂತೋಷ ನಾಗರಕಟ್ಟೆ


Copyright © KCO – Brindavana

# ಅಕ್ಕ ಚಲನಚಿತ್ರೋತ್ಸವ ಸಮಿತಿಯ ಮುಖ್ಯಸ್ಥ - ಮಲ್ಲಿಕ್ ಪ್ರಸಾದ್ ಸಂದರ್ಶನ

ಸಂದರ್ಶಕರು : ಅನಿಲ್ ಭಾರದ್ವಾಜ

೯ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನಕ್ಕೆ ಕ್ಷಣ ಗಣನೆ ಪ್ರಾರಂಭವಾಗಿದೆ. ನ್ಯೂ ಜೆರ್ಸಿಯ ಪ್ರೇಮ ಲೋಕ ಅಟ್ಲಾಂಟಿಕ್ ಸಿಟಿಯಲ್ಲಿ ಕನ್ನಡದ ಜಾತ್ರೆ ಭರ್ಜರಿಯಾಗಿ ನೆರವೇರಲಿದೆ. ಅಕ್ಕ ಸಮ್ಮೇಳನದಲ್ಲಿ ಪ್ರಪ್ರಥಮ ಬಾರಿ ಕನ್ನಡ ಚಲನ ಚಿತ್ರೋತ್ಸವ ನಡೆಯಲಿದೆ, ಇದರ ಉಸ್ತುವಾರಿ ವಹಿಸಿರುವ ಮಲ್ಲಿಕ್ ಪ್ರಸಾದ್ ಈ ಕಾರ್ಯಕ್ರಮದ ವಿವರಗಳನ್ನು ಹಂಚಿಕೊಂಡಿದ್ದಾರೆ.

ಪ್ರ : **೯ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನದ ವಿಶೇಷ ನಿಮ್ಮ ಪ್ರಕಾರ ಯಾವುದು ?**

ಉ : ಕನ್ನಡ ಚಿತ್ರರಂಗದ ಸಾಧನೆಗಳನ್ನು ಹೊರನಾಡ ಕನ್ನಡಿಗರಿಗೆ ತಲುಪಿಸುವ ಪ್ರಯತ್ನವಾಗಿ ಈ ಭಾರಿಯ ಅಕ್ಕ ಕನ್ನಡ ಸಮ್ಮೇಳನದಲ್ಲಿ 'ಕನ್ನಡ ಚಲನ ಚಿತ್ರ ಹಬ್ಬ' ಎಂಬ ವಿಭಿನ್ನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಕನ್ನಡ ಚಿತ್ರರಂಗ ನಡೆದು ಬಂದ ಹಾದಿಯನ್ನು ವಿವರಿಸುವ ಛಾಯಾಚಿತ್ರ ಮತ್ತು ವಿಡಿಯೋ ಪ್ರದರ್ಶನಗಳು ಈ ಚಲನ ಚಿತ್ರ ಹಬ್ಬದ ಆಕರ್ಷಣಾ ಬಿಂದುಗಳು. ಈ ಕಾರ್ಯಕ್ರಮ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಕನ್ನಡ ಚಲನ ಚಿತ್ರಗಳ ಪ್ರಚಾರಕ್ಕೆ ಒಂದು ಉತ್ತಮ ವೇದಿಕೆ ಕಲ್ಪಿಸಿ ಕೊಡಲಿದೆ. ಅಕ್ಕ ಕನ್ನಡ ಚಲನ ಚಿತ್ರ ಹಬ್ಬದ ಮುಖ್ಯ ವಿಷಯ - "ಕನ್ನಡ ಸಿನೆಮಾ ಬೇರು ಮತ್ತು ಹೊಸ ಚಿಗುರು"

ಪ್ರ : **ಕನ್ನಡ ಚಲನಚಿತ್ರ ಹಬ್ಬದಲ್ಲಿ ಹೇಗೆ ಭಾಗವಹಿಸಬಹುದು ? ಹೇಗೆ ನಡೆಯುತ್ತದೆ ?**

ಉ : ಈ ಮೇಲಿನ ವಿಷಯಾಧಾರಿತ ಚಲನ ಚಿತ್ರ ಹಬ್ಬದಲ್ಲಿ ಸರಿ ಸುಮಾರು ೧೨ ಚಿತ್ರಗಳ ಪ್ರದರ್ಶನಕ್ಕೆ ಅವಕಾಶವಿದೆ. ೮೫ - ೯೦ ಪ್ರತಿಶತ ಚಿತ್ರಗಳು ಹೊಸ ಚಿಗುರು ವರ್ಗದಲ್ಲಿ ಹಾಗೂ ಉಳಿದ ೧೦-೧೫ ಪ್ರತಿಶತ ಚಿತ್ರಗಳು ಕನ್ನಡ ಶಾಸ್ತ್ರೀಯ ವರ್ಗದಲ್ಲಿ ಪ್ರದರ್ಶನಗೊಳ್ಳಲಿವೆ. ಅಕ್ಕ ಚಲನ ಚಿತ್ರ ಹಬ್ಬದಲ್ಲಿ ಪ್ರದರ್ಶಿಸಲ್ಪಡುವ ಚಲನ ಚಿತ್ರಗಳು filmfesti-val2016@akkaonline.com ಗೆ ಆಗಸ್ಟ್ ೧೦ ರ ಒಳಗಾಗಿ ಇಮೇಲ್ ಮುಖಾಂತರ ನಮಗೆ ವಿವರಗಳೊಂದಿಗೆ ತಲುಪಿವೆ. ಚಿತ್ರದ ಸಾರಾಂಶ, ಪಡೆದ ಪ್ರಶಸ್ತಿ ಅಥವಾ ಮೆಚ್ಚುಗೆಯ ವಿವರಗಳು, ಪಾತ್ರವರ್ಗ ಹಾಗೂ ಚಿತ್ರ ತಂಡದ ವಿವರ ಹಾಗೂ ಚಿತ್ರವನ್ನು ಅಕ್ಕ ಚಲನ ಚಿತ್ರ ಹಬ್ಬದಲ್ಲಿ ಪ್ರದರ್ಶಿಸಲು ಮತ್ತು ಪ್ರಚಾರ ಪಡಿಸಲು ನಿರ್ದೇಶಕ ಮತ್ತು ನಿರ್ಮಾಪಕರ ಅನುಮತಿ ತಲುಪಿವೆ.

**ಚಲನ ಚಿತ್ರ ಹಬ್ಬದ ನಿಯಮಗಳು:**

*. ಪೂರ್ಣ ಪ್ರಮಾಣದ ಕನ್ನಡ ಚಿತ್ರಗಳು ಮಾತ್ರ ಅಕ್ಕ ಚಲನ ಚಿತ್ರಹಬ್ಬದಲ್ಲಿ ಪ್ರದರ್ಶಿತವಾಗಲು ಅರ್ಹ.

*. ಚಿತ್ರವು ಮೂಲತಃ ಕನ್ನಡದಲ್ಲಿ ನಿರ್ಮಿತವಾಗಿರಬೇಕು.

*. 'ಹೊಸ ಚಿಗುರು' ವರ್ಗದಲ್ಲಿ ಜನವರಿ ೧, ೨೦೧೪ ರ ನಂತರ ಪೂರ್ಣಗೊಂಡ ಚಿತ್ರಗಳಿಗೆ ಮಾತ್ರ ಅವಕಾಶ.

*. 'ಹಳೆ ಬೇರು' ವರ್ಗದಲ್ಲಿ ಪ್ರದರ್ಶಿತಗೊಳ್ಳುವ ಚಿತ್ರಗಳು ಜನವರಿ ೧, ೨೦೧೪ ರ ಹಿಂದೆ ನಿರ್ಮಾಣ ಗೊಂಡದ್ದಾಗಿರಬೇಕು.

*. ಸ್ಯಾಂಡಲ್ ವುಡ್ ನ ಗಣ್ಯ ತಂತ್ರಜ್ಞರು ಹಾಗೂ ಅಕ್ಕ ಚಲನ ಚಿತ್ರ ಹಬ್ಬದ ಸದಸ್ಯರನ್ನೊಳಗೊಂಡ ತಂಡ ಚಿತ್ರಗಳ ಆಯ್ಕೆಯನ್ನು ಮಾಡಲಿದೆ.

*. ಆಯ್ಕೆಯಾದ ಚಲನಚಿತ್ರಗಳಿಗೆ ಅಕ್ಕ ದಿಂದ ಪರಿಹಾರ/ ಪ್ರಯಾಣ ಧನ ಇರುವುದಿಲ್ಲ ಮತ್ತು ಚಲನ ಚಿತ್ರ ಹಬ್ಬದ ಎಲ್ಲಾ ಚಟುವಟಿಕೆಗಳಿಗೆ AKFF ತಂಡದ ನಿರ್ಧಾರಗಳೇ ಅಂತಿಮ.

ಪ್ರ . **ಈ ಕನ್ನಡ ಚಲನ ಚಿತ್ರ ಹಬ್ಬದಿಂದ ಏನು ಪ್ರಯೋಜನ ?**

ಉ . ಈ ಕಾರ್ಯಕ್ರಮಗಳಿಂದಾಗಿ ತಮ್ಮಂತಹ ಸಮಾನ ಮನಸ್ಕ ವ್ಯಕ್ತಿಗಳ ಹಾಗೂ ಸಂಸ್ಥೆಗಳ ಜೊತೆಗೂಡಿ ಕನ್ನಡ ಚಿತ್ರರಂಗದ ಅಭಿವೃದ್ಧಿಗಾಗಿ ಈ ಕೆಳಗಿನ ವಿಧಾನಗಳ ಮೂಲಕ ಶ್ರಮಿಸುವ ಪ್ರಯತ್ನ ನಮ್ಮದು.

*. ಎಲ್ಲರೂ ಒಂದು ಗೂಡಿ ಅಮೆರಿಕಾದಲ್ಲಿ ಕನ್ನಡ ಚಿತ್ರಗಳ ಮಾರುಕಟ್ಟೆ ವಿಸ್ತರಿಸುವ ಪ್ರಯತ್ನ

*. ಹೊರನಾಡ ಕನ್ನಡಿಗರು ಹಾಗೂ ಕನ್ನಡ ಚಿತ್ರರಂಗದ ಪ್ರಮುಖ ನಿರ್ದೇಶಕರ ನಡುವೆ ಸಂವಾದ ಕಾರ್ಯಕ್ರಮ

*. ಹೊಸ ಹೊಸ ವಿಚಾರ ವಿನಿಮಯಗಳಿಂದ ಕನ್ನಡ ಚಿತ್ರರಂಗದ ಪ್ರಗತಿ

*. ಅನಿವಾಸಿ ಕನ್ನಡಿಗರು ಕನ್ನಡ ಚಿತ್ರರಂಗದಲ್ಲಿ ಪಾಲ್ಗೊಳ್ಳಲು ಮಾರ್ಗ, ಸಂಪರ್ಕ ಮತ್ತು ವ್ಯವಸ್ಥೆ ಕಲ್ಪಿಸೋಣ

ಈ ಮಹತ್ವಾಕಾಂಕ್ಷಿ ಕಾರ್ಯಕ್ರಮಕ್ಕೆ ತಮ್ಮೆಲ್ಲರ ಸಹಕಾರ ಮತ್ತು ಪ್ರಾಯೋಜಕತ್ವಕ್ಕೆ ಸವಿನಯ ಪೂರ್ವಕವಾಗಿ ಆಮಂತ್ರಿಸುತ್ತಿದ್ದೇವೆ.

| ಮೊದಲನೇ ಅಕ್ಕ ಕನ್ನಡ ಚಲನ ಚಿತ್ರ ಹಬ್ಬ ತಂಡ - ೨೦೧೬ | |
|---|---|
| **1st Akka Kannada Film Festival Team - 2016** | |
| Shri. Mallik Prasad | Chair |
| Shri. Ravishankar Nandeeshappa | |
| Shri. Keshav Prashant | |
| Smt. Lakshmi Ramachandrappa | |
| Shri. Anand Rao | |
| Shri. Ravi Kashyap | |
| Shri. Paramesh Dandappanavar | |
| **Karnataka Chalana Chitra Academy & Industry** | |
| Shri. S. V. Rajendra Singh Babu | Advisor |
| Shri. Girish Kasaravalli | Jury |
| Shri. Nagabharana | Jury |
| Shri. Lingadevaru | Advisor |


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಕನ್ನಡ ಕೂಟದ ಮುಂಬರುವ ಚಟುವಟಿಕೆಗಳು




### ಸದಸ್ಯತ್ವ ಮಾಹಿತಿ

ಬೃಂದಾವನ ಕನ್ನಡ ಕೂಟ ,ಕನ್ನಡ ಮತ್ತು ಕನ್ನಡಿಗರ ಪರವಾದ ಕಾರ್ಯಕ್ರಮಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ನ್ಯೂ ಜೆರ್ಸಿ ಮತ್ತು ಸುತ್ತ ಮುತ್ತ ಇರುವ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಎಂಬ ವಿನಂತಿ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಬೃಂದಾವನದ "ಸದಸ್ಯತ್ವ". ವಾರ್ಷಿಕ , ದ್ವೈ ವಾರ್ಷಿಕ , ಅಜೀವ ಅಥವಾ ವಿದ್ಯಾರ್ಥಿ ಸದಸ್ಯತ್ವಗಳಲ್ಲಿ ,ನಿಮಗೆ ಸೂಕ್ತವಾದ ಸದಸ್ಯತ್ವವನ್ನು ಆಯ್ಕೆ ಮಾಡಿ. ಈಗ ಸದಸ್ಯತ್ವ ಪರಿಪೂರ್ಣ ಇಲೆಕ್ಟ್ರಾನಿಕ್ ರೂಪದಲ್ಲಿ ಆನ್ಲೈನ್ ದೊರೆಯುತ್ತದೆ. www.brindavana.orgಗೆ ಹೋಗಿ ನಿಮ್ಮ ವಿವರಗಳನ್ನು ನೀಡಿ ಸೂಕ್ತವಾದ ಸದಸ್ಯತ್ವ ಪಡೆಯಿರಿ. ಕ್ಷಣಾರ್ಧದಲ್ಲಿ ನಿಮಗೆ e-mail ಮುಖೇನ ಸದಸ್ಯತ್ವದ ವಿವರ ಬಂದು ಸೇರುವುದು. ನಿಮ್ಮ ಈ ಬೃಂದಾವನ, Karnataka Cultural Organization - Brindavana (KCOB) NJ, USA. 501(3)(c)ಪಡೆದ ಚಾರಿಟಿ ಸಂಸ್ಥೆ. ಇದಕ್ಕೆ ನಿಮ್ಮ ಕಾಣಿಕೆ ಪರಿಪೂರ್ಣ ಟ್ಯಾಕ್ಸ್ ರಹಿತ.

ಏನಾದರು ಪ್ರಶ್ನೆ ಇದ್ದಲ್ಲಿ president@brindavana.orgಗೆ ಇ-ಮೇಲ್ ಮಾಡಿ.

### ಸೂಚನೆ:

ನ್ಯೂ ಜೆರ್ಸಿಯ ಮತ್ತು ಸಮಸ್ತ ಕನ್ನಡದ ಸ್ನೇಹಿತರೆಲ್ಲರೂ "ಬೃಂದಾವನ ವಾಣಿ"ಯಲ್ಲಿ ಭಾಗಿಗಳಾಗಬೇಕೆಂಬುದು ನಮ್ಮ ಆಶಯ. ವಾಣಿಯಲ್ಲಿ ಮೂಡಿಬರುವ ಅಂಕಣಗಳು- ಸಾಹಿತ್ಯವಾಣಿ,ವನಿತಾವಾಣಿ, ಪುಟಾಣಿ-ಪ್ರಪಂಚ,ಬಾಲಪ್ರತಿಭೆ, ಕ್ರೀಡೆ, ಅಮೆರಿಕಾ ನಾ ಕಂಡಂತೆ, ಯುವ ವಾಣಿ, ಸುತ್ತ-ಮುತ್ತ, ಹಾಗೇ ಸುಮ್ಮನೆ.. ಈ ಅಂಕಣಗಳಿಗೆ ಲೇಖನ,ಕವನ,ಕಥೆ, ಚುಟುಕುಗಳನ್ನು ಬರೆದು ಕಳಿಸಿ. ಅಡುಗೆ, ಮನೆ ಮದ್ದು, ಅಲಂಕಾರ, ಸಂಪ್ರದಾಯಗಳ ಮಾಹಿತಿ ನೀಡುವ ಕಿರುಲೇಖನಗಳನ್ನು, ಮಕ್ಕಳು ಬರೆದ ವರ್ಣಚಿತ್ರಗಳನ್ನು ಕಳುಹಿಸಬಹುದು. ಮಕ್ಕಳಿಗಾಗಿ ನೀತಿ ಕಥೆಗಳನ್ನು ಬರೆದು ಕಳಿಸಿ.

**ಅಮೆರಿಕಾ ನಾ ಕಂಡಂತೆ** - ಇದು ಜೀವನಾನುಭವಗಳ ಅಂಕಣ. ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ. ನೀವು ಕ್ಲಿಕ್ಕಿಸಿದ ಸುಂದರ ಛಾಯಾಚಿತ್ರಗಳನ್ನು ಕಳುಹಿಸಬಹುದು.

ನಿಮ್ಮ ಅನಿಸಿಕೆ,ಸಲಹೆ,ಸೂಚನೆಗಳಿಗೆ ತಪ್ಪದೇ ತಿಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ವಿಶೇಷ ಸೂಚನೆ** : ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು.ಲೇಖನಗಳು ಸಂಕ್ಷಿಪ್ತವಾಗಿರಲಿ. ಕಳುಹಿಸಿದ ಮಾಹಿತಿ,ಲೇಖನ ಅಸಂಪೂರ್ಣ ಅಥವಾ ಅನುಚಿತವೆನಿಸಿದರೆ ಅದನ್ನು ಪ್ರಕಟಿಸಲಾಗುವುದಿಲ್ಲ.ಸಂಪಾದಕ ಮಂಡಳಿಯ ತೀರ್ಮಾನವೇ ಅಂತಿಮ. 'ಬೃಂದಾವನ ವಾಣಿ'ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು, ಮಾಹಿತಿಗಳಿಗೆಲ್ಲ ಲೇಖಕರೇ ಜವಾಬ್ದಾರರು.ಅಂಕಣಗಳಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ ,'ಬೃಂದಾವನ ವಾಣಿ' ಮತ್ತು ಬೃಂದಾವನ' ಕನ್ನಡ ಕೂಟ ಜವಾಬ್ದಾರರಲ್ಲ.


Copyright © KCO – Brindavana